ಉತ್ತರ ಕನ್ನಡ ಜಿಲ್ಲೆಗಳಲ್ಲಿ ಹೆಚ್ಚಿಗೆ ಅಡಿಕೆ ಬೆಳೆಯುತ್ತಿದ್ದಾರೆ. ಅಡಿಕೆಗೆ ಈಗಾಗಲೇ ಹೆಚ್ಚಾಗಿ 'ಹಳದಿರೋಗ' ಬರುತ್ತಿದೆ. ಅದರ ಜೊತೆಗೆ ಕೇಂದ್ರ ಸರ್ಕಾರ 'ವಿದೇಶಿ' 'ವಿದೇಶಿ' ಎಂದು ಹೇಳಿ ಸ್ವದೇಶಿಯನ್ನು ತೆಗೆದು ಹಾಕುತ್ತಿದ್ದಾರೆ. ಈಗ ಸ್ವದೇಶಿ ಮಾಲಿಗೆ ಹೆಚ್ಚಿನ ಆದ್ಯತೆಯನ್ನು ಕೊಡುತ್ತಿದ್ದಾರೆ. ಹಿಂದೆ ಮಾನ್ಯ ರಾಮಕೃಷ್ಣ ಹೆಗಡೆಯವರು ಕೇಂದ್ರದಲ್ಲಿ ವಾಣಿಜ್ಯ ಮಂತ್ರಿಯಾಗಿದ್ದಾಗ ಅಡಿಕೆಗೆ ಹೆಚ್ಚಿಗೆ ಬೆಲೆ ಸಿಗುತ್ತಿತ್ತು. ಈಗ ಅಡಿಕೆ ಬೆಲೆ ಬಹಳ ಕುಸಿಯುತ್ತಿದೆ. ಸರ್ಕಾರ ಇದರ ಬಗ್ಗೆ ಹೆಚ್ಚಿನ ಗಮನ ಕೊಡಬೇಕು. ಈ ಬಗ್ಗೆ ದೀರ್ಘವಾಗಿ ಯೋಚನೆ ಮಾಡಿದರೆ ಅಡಿಕೆ ಬೆಳೆಗೆ ಇವತ್ತು ಗಂಡಾಂತರ ಬಂದಿದೆ. ಎಲ್ಲೆಲ್ಲೂ ಹೆಚ್ಚು ಅಡಿಕೆ ಬೆಳೆಯುತ್ತಿದ್ದಾರೆ. ಒಂದು ರೀತಿಯಲ್ಲಿ ನೋಡಿದರೆ ನನ್ನ ಮಿತ್ರರು ಹೇಳಿದ ಹಾಗೆ ಇನ್ನುಮುಂದೆ ಬರೀ ಅಡಿಕೆಯನ್ನು ತಿನ್ನಬೇಕಾಗುತ್ತದೆ. ಇತ್ತಕಡೆ ಭತ್ತ ಹೋಯಿತು, ಕಬ್ಬು ಹೋಯಿತು ಈಗ ಅಡಿಕೆ ಬಂದಿದೆ. ಇದಕ್ಕೆ ಸರ್ಕಾರ ಏನಾದರೂ ಒಂದು ಮಿತಿಯನ್ನು ಹಾಕಬೇಕು. ಅಡಿಕೆ ಬೆಳೆಯಲಿಕ್ಕೆ ವರ್ಷಕ್ಕೆ ಒಂದು ಎಕರೆಗೆ 5 ಸಾವಿರ ರೂಪಾಯಿಗಳ ಖರ್ಚು ಬರುತ್ತದೆ. ಅಡಿಕೆ ಬೆಳೆಗೆ ಸರ್ಕಾರ ಹೆಚ್ಚಿನ ಆದ್ಯತೆಯನ್ನು ಕೊಡಬೇಕು. ಅಡಿಕೆ ಬಗ್ಗೆ ಸಂಶೋಧನೆ ಮಾಡತಕ್ಕ ಕೃಷಿ ವಿಶ್ವ ವಿದ್ಯಾನಿಲಯಕ್ಕೆ ಅದರಲ್ಲೂ ಶಿವಮೊಗ್ಗಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಅಲ್ಲಂ ವೀರಭದ್ರಪ್ಪ: ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಈಗಾಗಲೇ ಕೃಷಿ ಸಚಿವರು ಉತ್ತರ ಕೊಟ್ಟಿದ್ದಾರೆ. ಇದರ ಬಗ್ಗೆ ಸದನದಲ್ಲಿ ಸಾಕಷ್ಟು ಚರ್ಚೆಯಾಗಿದೆ. ಮಾನ್ಯ ಸದಸ್ಯರು ಹೇಳಿರತಕ್ಕ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಕೇಂದ್ರ ಸರ್ಕಾರದ ಜೊತೆ ಚರ್ಚೆ ನಡೆಸಿ ನಾವು ಇದಕ್ಕೆ ಪರಿಹಾರವನ್ನು ಕಂಡುಕೊಳ್ಳುತ್ತೇವೆ.

ಮಾಜಿ ಶ್ಯಾನುಭೋಗರು ಹಾಗೂ ಮಾಜಿ ಪಟೇಲರು-ಇವರುಗಳಿಗೆ ಕೊಡುವ ಗೌರವ ಧನದ ಬಗ್ಗೆ.

242(2834)

ಶ್ರೀ ಪಾಟೀಲ್ ಸಿದ್ದಲಿಂಗನಗೌಡ ಸಿದ್ದನಗೌಡ(ಮುಂಡರಗಿ): ಮಾನ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಸಿಕ ಗೌರವ ಧನವನ್ನು ಮಾಜಿ ಶಾನುಭೋಗರಿಗೆ ಹಾಗೂ ಮಾಜಿ ಪಟೇಲರಿಗೆ ಮಾಸಿಕವಾಗಿ ಕೊಡುವುದೆಷ್ಟು? ಸದರಿ ಗೌರವ ಧನವನ್ನು ಮಂಜೂರು ಮಾಡಲು ಇರುವ ಷರತ್ತುಗಳೇನು?

ಆ) ಸದರಿ ಮಾಜಿ ಶ್ಯಾನುಭೋಗರು ಹಾಗೂ ಮಾಜಿ ಪಟೇಲರಿಗೆ ಕೊಡುವ ಗೌರವ ಧನದಲ್ಲಿ ವ್ಯತ್ಯಾಸವಿದೆಯೇ?

ವ್ಯತ್ಯಾಸವಿದ್ದಲ್ಲಿ ಸದರಿ ವ್ಯತ್ಯಾಸವನ್ನು ಸರಿಪಡಿಸಲಾಗುವುದೆ? ವ್ಯತ್ಯಾಸವನ್ನು ಸರಿಪಡಿಸುವಂತೆ ಸರ್ಕಾರಕ್ಕೆ ಪಟೇಲರು ಮೊರೆ ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಇ) ಹಾಗಿದ್ದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಸಿ.ಶ್ರೀಕಂಠಯ್ಯ (ಕಂದಾಯ ಸಚಿವರು):

ಅ) ಪ್ರಸ್ತುತ ರಾಜ್ಯದ ಮಾಜಿ ಶ್ಯಾನುಭೋಗರು ಹಾಗೂ ಮಾಜಿ ಪಟೇಲರುಗಳು ಮಾಸಿಕ ರೂ.500-00 ಗಳ ಅಡಹಾಕ್ ಭತ್ಯೆ ಪಡೆಯುತ್ತಿದ್ದಾರೆ. ಮಾಜಿ ಶ್ಯಾನುಭೋಗರಿಗೆ ಸಂಬಂಧಿಸಿದಂತೆ ಸರ್ಕಾರದ ಆದೇಶ ಸಂ.ಆರ್ಡಿ.125 ಎಂವಿಎಸ್ 89 ದಿನಾಂಕ:20-7-1991ರಲ್ಲಿ ಷರತ್ತುಗಳನ್ನು ವಿಧಿಸಲಾಗಿದೆ.

ಮಾಜಿ ಪಟೇಲರುಗಳಿಗೆ ಸಂಬಂಧಿಸಿದಂತೆ, ಸರ್ಕಾರದ ಆದೇಶ ಸಂಖ್ಯೆ.ಆರ್ಡಿ.286 ಎಂವಿಎಸ್ 91 ದಿನಾಂಕ 30-5-94ರಲ್ಲಿ ಷರತ್ತುಗಳನ್ನು ವಿಧಿಸಲಾಗಿದೆ.

ಆ) ಪಟೇಲರಿಗೆ ಹಾಗೂ ಶ್ಯಾನುಭೋಗರಿಗೆ ಅನುಕಂಪದ ಭತ್ಯೆ ನೀಡುತ್ತಿರುವ ದಿನಾಂಕಗಳಲ್ಲಿ ವ್ಯತ್ಯಾಸವಿದ್ದು, ಈ ಬಗ್ಗೆ ಮಾಜಿ ಪಟೇಲರ ಸಂಘವು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಹಾಗೂ ಸರ್ಕಾರ ರಿಟ್ ಅಫೀಲು ಸಲ್ಲಿಸಿದ್ದು ತೀರ್ಮಾನ ಬಾಕಿ ಇದೆ.

ಇ) ರಿಟ್ ಅಪೀಲು ತೀರ್ಮಾನವನ್ನು ಕಾಯಬೇಕಾಗಿದೆ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಮಾನ್ಯಮಂತ್ರಿಗಳು ನನ್ನ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದಾರೆ, ಶಾನುಭೋಗರು ಮತ್ತು ಪಟೇಲರಿಗೆ ಕೊಡತಕ್ಕ ಗೌರವಧನ ಏನಿದೆ, ಅದನ್ನು ಕೊಡುವುದಕ್ಕೆ ಕೆಲವು ಷರತ್ತುಗಳನ್ನು ವಿಧಿಸಲಾಗಿದೆಯೆಂದು ಹೇಳಿದ್ದಾರೆ. ಅದು ಯಾವ ಷರತ್ತುಗಳೆಂದು ದಯವಿಟ್ಟು ಅವರು ಹೇಳಬೇಕು. ಆಮೇಲೆ ಆ ಗೌರವಧನ ಕೇವಲ 500 ರೂಪಾಯಿಗಳನ್ನು ಕೊಡುತ್ತಿದ್ದೀರಿ. ಈಗಿನ ಪರಿಸ್ಥಿತಿಯೊಳಗೆ ಅದು ಬಹಳ ಕಡಿಮೆಯಾಗುತ್ತದೆ. ಆದುದರಿಂದ ಅದನ್ನು ಹೆಚ್ಚು ಮಾಡುತ್ತೀರಾ? ಶಾನುಭೋಗರಿಗೆ 1991ನೇ ಇಸವಿಯಿಂದ ಗೌರವಧನವನ್ನು ಜಾರಿ ಮಾಡಿದ್ದೀರಿ, ಪಟೇಲರಿಗೆ 1994ರಿಂದ ಜಾರಿ ಮಡಿದ್ದೀರಿ. ಈ ಗೌರವಧನದಲ್ಲಿ ಆಗಿರುವ ವ್ಯತ್ಯಾಸವನ್ನು ಸರಿಪಡಿಸುತ್ತೀರಾ? ನನ್ನ ಈ ಮೂರು ಪ್ರಶ್ನೆಗಳಿಗೆ ಮಾನ್ಯ ಮಂತ್ರಿಗಳು ದಯವಿಟ್ಟು ಉತ್ತರ ಕೊಡಬೇಕು.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ: ಮಾನ್ಯ ಅಧ್ಯಕ್ಷರೆ, ರಾಜ್ಯದ ಮಾಜಿ ಶಾನುಭೋಗರಿಗೆ ಸರ್ಕಾರದ ಆದೇಶ ಸಂಖ್ಯೆ:ಆರ್ಡಿ ಎಂವಿಎಸ್ 77 ದಿನಾಂಕ:31-7-79ರ ಆದೇಶದಲ್ಲಿ

ದಿನಾಂಕ: 1-8-79ರಿಂದ ಅನ್ವಯವಾಗುವಂತೆ ಮಾಸಿಕ ರೂಪಾಯಿ 100 ಅನುಕಂಪ ಭತ್ಯೆಯೆಂದು ಮಂಜೂರು ಮಾಡಲಾಗಿತ್ತು. ನಂತರ ಸರ್ಕಾರದ ಆದೇಶದ ಸಂಖ್ಯೆ ಆರ್ಡಿ 125 ಎಂವಿಎಸ್ 89 ದಿನಾಂಕ 20-7-91ರ ಆದೇಶದಲ್ಲಿ 500 ರೂಪಾಯಿ ಅಡಹಾಕ್ ಭತ್ಯೆಗೆ ದಿನಾಂಕ 1-7-90ರಿಂದ ಜಾರಿಗೆ ಬರುವಂತೆ ಹೆಚ್ಚಿಸಲಾಗಿದೆ.

ರಾಜ್ಯದ ಮಾಜಿ ಪಟೇಲರುಗಳಿಗೆ ಸರ್ಕಾರದ ಆದೇಶ ಸಂಖ್ಯೆ:ಆರ್ಡಿ 443 ಎಂವಿಎಸ್(1)82 ದಿನಾಂಕ 20-9-84ರ ಆದೇಶದಲ್ಲಿ ವಾರ್ಷಿಕ 4,800 ರೂಪಾಯಿಗಳ ಆದಾಯ ಮಿತಿ ನಿಗದಿಪಡಿಸಿ ರೂಪಾಯಿ 100ರಂತೆ ಅಡಹಾಕ್ ಭತ್ಯೆಯವನ್ನು ದಿನಾಂಕ 15-8-84ರಿಂದ ನೀಡಲಾಗುತ್ತಿದ್ದು, ನಂತರ ದಿನಾಂಕ 1-1-94ರಿಂದ ಜಾರಿಗೆ ಬರುವಂತೆ 500ರೂಪಾಯಿ ಅಡಹಾಕ್ ಭತ್ಯೆಗೆ ಹೆಚ್ಚಿಸಲಾಗಿದೆ. ದಿನಾಂಕ 20-9-84ರ ಆದೇಶದಲ್ಲಿ ನಿಗದಿಪಡಿಸಲಾಗಿದ್ದ ರೂಪಾಯಿ 4,800ರ ಆದಾಯ ಮಿತಿಯನ್ನು ದಿನಾಂಕ 2-5-96ರ ಆದೇಶದಲ್ಲಿ ದಿನಾಂಕ 1-1-94ರಿಂದ ಜಾರಿಗೆ ಬರುವಂತೆ ತೆಗೆದುಹಾಕಲಾಗಿದೆ.

ರಾಜ್ಯ ಮಾಜಿ ಪಟೇಲರ ಸಂಘವು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ 33918-919:94 ಯಲ್ಲಿ ಸಲ್ಲಿಸಿ ಮಾಜಿ ಶಾನುಭೋಗರಿಗೆ ದಿನಾಂಕ 1-8-79ರಿಂದ ರೂಪಾಯಿ 100ರಂತೆ ಮಾಸಿಕ ಅನುಕಂಪ ಭತ್ಯೆ ಮತ್ತು ದಿನಾಂಕ 1-7-79ರಿಂದ ಮಾಸಿಕ 500 ರೂಪಾಯಿಗಳ ಅಡಹಾಕ್ ಭತ್ಯೆಗೆ ಹೆಚ್ಚಿಸಿರುವಂತೆ ತಮಗೂ ಅದೇ ದಿನಾಂಕದಿಂದ ಅನುಕಂಪ ಭತ್ಯೆ ಮತ್ತು ಅಡಹಾಕ್ ಭತ್ಯೆಯನ್ನು ನೀಡುವಂತೆ ಕೋರಿರುತ್ತಾರೆ. ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ 33918-919:94 ಯಲ್ಲಿ ದಿನಾಂಕ 24-7-97ರಲ್ಲಿ ಮಾಜಿ ಶಾನುಭೋಗರಿಗೆ ನೀಡಿದ ದಿನಾಂಕದಿಂದಲೇ ಮಾಜಿ ಪಟೇಲರಿಗೂ ರೂಪಾಯಿ 100 ಅನುಕಂಪ ಭತ್ಯೆ ಮತ್ತು 500 ರೂಪಾಯಿ ಅಡಹಾಕ್ ಭತ್ಯೆ ನೀಡಲು ತೀರ್ಪು ನೀಡಿದೆ. ಸದರಿ ಆದೇಶದ ವಿರುದ್ಧ ಸರ್ಕಾರವು ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ರಿಟ್ ಅಪೀಲ್ ಸಂಖ್ಯೆ: 6151-6142:97ರಲ್ಲಿ ನ್ಯಾಯಾಲಯವು ದಿನಾಂಕ 2-4-98 ಮತ್ತು 3-3-98ರಲ್ಲಿ ನೀಡಿದ ಮಧ್ಯಂತರ ಆದೇಶದನ್ವಯ ಮಾಸಿಕ ರೂಪಾಯಿ 100ರಂತೆ ಅನುಕಂಪ ಭತ್ಯೆ ಪಡೆಯುತ್ತಿದ್ದ ಮಾಜಿ ಪಟೇಲರುಗಳಿಗೆ ದಿನಾಂಕ 8-10-91ರಿಂದ 31-12-93ರವರೆಗೆ ಮಾಸಿಕ ರೂಪಾಯಿ 400(ಈಗಾಗಲೇ ಪಾವತಿಸಿರುವ 100 ರೂಪಾಯಿ ಹೊರತುಪಡಿಸಿ) ಬಾಕಿ ಅನುಕಂಪ ಭತ್ಯೆ ಮಂಜೂರು ಮಾಡಲು ಸರ್ಕಾರದ ಆದೇಶ ಸಂಖ್ಯೆ ಆರ್ಡಿ 204 ಎಂವಿಎಸ್ 96ದಿನಾಂಕ 5-9-98ರ ಆದೇಶದಲ್ಲಿ ಆ ಆದೇಶದಲ್ಲಿನ ಷರತ್ತುಗಳಿಗೊಳಪಟ್ಟು ಮಂಜೂರಾತಿ ನೀಡಿದೆ.

10-50 ಎ.ಎಂ

ಶ್ರೀ ಎಸ್.ಎಸ್.ಪಾಟೀಲ್: ಸನ್ಮಾನ್ಯ ಅಧ್ಯಕ್ಷರೇ, ನಾನು ಕೇಳಿದ ಪ್ರಶ್ನೆಗೆ ಅವರು

ಉತ್ತರ ಕೊಟ್ಟಿಲ್ಲ. ಅವರು ರಿಟ್ ಅರ್ಜಿಯನ್ನು ಕೋರ್ಟಿನಿಂದ ಹಿಂದಕ್ಕೆ ತೆಗೆದುಕೊಂಡರೆ ವ್ಯತ್ಯಾಸವನ್ನು ಸರಿಪಡಿಸುತ್ತೀರಾ? ಆಮೇಲೆ ಗೌರವಧನ ಹೆಚ್ಚಿಗೆ ಮಾಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ? ಎಂದು ನಾನು ಕೇಳುತ್ತೇನೆ. ಗೌರವಧನ ಹೆಚ್ಚು ಮಾಡುವುದು ಕೂಡ ಯೋಗ್ಯ ಇದೆ. ಕೇವಲ ಐದು ನೂರು ರೂಪಾಯಿಗಳನ್ನು ಕೊಟ್ಟರೆ ಇವತ್ತಿನ ಪರಿಸ್ಥಿತಿಯಲ್ಲಿ ಹೇಗೆ ಜೀವನ ಮಾಡುವುದಕ್ಕೆ ಸಾಧ್ಯ? ಅವರು ವಯಸ್ಸಾದವರು ಇದ್ದಾರೆ, ದುಡಿಯಲು ಹೋಗುವುದಕ್ಕೆ ಅವರಿಗೆ ಸಾಧ್ಯವಾಗುವುದಿಲ್ಲ. ಆ ಕಾರಣದಿಂದ ಇದನ್ನು ಹೆಚ್ಚಿಸಬೇಕೆಂದು ನಾನು ಹೇಳುತ್ತಿದ್ದೇನೆ.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ: ಈಗ ಕೋರ್ಟಿನ ಆದೇಶ ಏನು ಬರುತ್ತದೆ ಎಂದು ಕಾದು ನೋಡೋಣ. ಅದು ಬಂದ ಮೇಲೆ ನಾವು ಈ ಬಗ್ಗೆ ಪರಿಶೀಲನೆ ಮಾಡುವ ಪ್ರಯತ್ನ ಮಾಡುತ್ತೇವೆ.

ಶ್ರೀ ಎಸ್.ಎಸ್.ಪಾಟೀಲ್: ಕೋರ್ಟು ಆದೇಶ ಮಾಡಿದರೂ ಸರ್ಕಾರ ಅಪೀಲ್ ಮಾಡಿದೆ. ತಾವು ಶ್ಯಾನುಭೋಗರಿಗೂ ಅವರಿಗೂ ವ್ಯತ್ಯಾಸ ಏಕೆ ಮಾಡುತ್ತೀರಿ? ದಯವಿಟ್ಟು ತಾವು ಈ ವ್ಯತ್ಯಾಸವನ್ನು ಸರಿಪಡಿಸಬೇಕು.

ಶ್ರೀ ಜಗದೀಶ್ ಶೆಟ್ಟರ್(ವಿರೋಧಪಕ್ಷದ ನಾಯಕರು): ಕೋರ್ಟಿನಲ್ಲಿ ಈ ಕೇಸ್ ಇದೆ ಮತ್ತು ಸರ್ಕಾರದವರು ರಿಟ್ ಅಪೀಲ್ ಮಾಡಿದ್ದಾರೆ. ಅದಕ್ಕೆ ಪ್ರಮುಖರನ್ನು ಕರೆಸಿ ಮಾತನಾಡಿ. ಮಾಜಿ ಪಟೇಲರು ಹೆಚ್ಚು ಜನ ಉಳಿದಿಲ್ಲ, ಅವರು ಬಹಳ ಲಿಮಿಟೆಡ್ ಇದ್ದಾರೆ. ಅವರು ತಮ್ಮ ಜೀವನದ ಕೊನೆಯ ಹಂತದಲ್ಲಿ ಇರುವಂಥ ಸಮಯದೊಳಗೆ ಸ್ವಲ್ಪ ಗೌರವಧನ ಹೆಚ್ಚಿಗೆ ಮಾಡಿಕೊಡಬೇಕು. ಏನಾದರೂ ಮಾಡಿ ಇದನ್ನು ಬಗೆಹರಿಸುವಂಥ ಕೆಲಸವನ್ನು ಸರ್ಕಾರದವರು ಮಾಡಲಿ. ಕೋರ್ಟಿದಲ್ಲಿ ಕೇಸ್ ಇದೆ, ಇದು ಪೆಂಡಿಂಗ್ ಇದೆಯೆಂದು ಹೇಳಿ ಅದರ ಸಲುವಾಗಿ ವಿಳಂಬವಾಗಿ ಇದು ನಿಲ್ಲುವುದು ಬೇಡ. ಏನಾದರೂ ಮಾಡಿ ಅಲ್ಲಿಂದ ತರಿಸಿ ಕನ್ಸಿಲಿಯೇಶನ್ ಮಾಡಿ ಅದನ್ನು ಮುಗಿಸಿಬಿಡಿ ಎಂದು ನಾನು ಹೇಳುತ್ತೇನೆ.

ಶ್ರೀ ಎಸ್.ಎಸ್.ಪಾಟೀಲ್: ತಾವು ಸರಿ ಮಾಡುತ್ತೇವೆ ಎಂದು ಹೇಳಿದರೆ ಅವರು ರಿಟ್ ಅರ್ಜಿಯನ್ನು ವಾಪಸ್ಸು ತೆಗೆದುಕೊಳ್ಳಲಿಕ್ಕೆ ಸಿದ್ಧರಿದ್ದಾರೆ.

ಅಧ್ಯಕ್ಷರು: ವಿರೋಧಪಕ್ಷದ ನಾಯಕರಾದ ಜಗದೀಶ್ ಶೆಟ್ಟರ್ ಅವರು ಹೇಳಿದ ಹಾಗೆ ಅವರು ಬಹಳ ಕಡಿಮೆ ಮಂದಿ ಇದ್ದಾರೆ. ನೋಡಿ, ಕನ್ಸಿಡರ್ ಮಾಡಿ.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ: ಅನುಕಂಪ ಭತ್ಯೆ ಮತ್ತು ಮಾಸಿಕ ಭತ್ಯೆ ಏನಿದೆ ಅದರಲ್ಲಿ ಯಾವುದೇ ವ್ಯತ್ಯಾಸ ಇಲ್ಲ. ಕಾಲಮಿತಿಯೊಳಗೆ ಅದರಲ್ಲಿ ವ್ಯತ್ಯಾಸ ಆಗಿದೆ. ಅದನ್ನು ಸಾಧ್ಯವಾದಷ್ಟು ಸರಿಪಡಿಸುವುದಕ್ಕೆ ನಾವು ಪ್ರಯತ್ನ ಮಾಡುತ್ತೇನೆ.

ಶ್ರೀ ಎಸ್.ಎಸ್.ಪಾಟೀಲ್: ಅವರು ಪರಿಶೀಲಿಸುವುದು ಬೇಕಾಗಿಲ್ಲ. ಅವರಿಗೆ ಇವರಿಗೆ ಯಾವುದೇ ವ್ಯತ್ಯಾಸ ಇಲ್ಲ. ದಯಮಾಡಿ ತಾವು ಸರಿಮಾಡುತ್ತೇನೆಂದು ಹೇಳಿದರೆ ಅವರು ಕೋರ್ಟಿನಿಂದ ವಾಪಸ್ಸು ತೆಗೆದುಕೊಳ್ಳುವುದಕ್ಕೆ ಹೇಳುತ್ತೇನೆ. ಈಗ ಕೊಡತಕ್ಕಂಥ ಮಾಸಿಕ ಗೌರವಧನ ಐದುನೂರು ರೂಪಾಯಿ ಸಾಲುವುದಿಲ್ಲ. ದಯವಿಟ್ಟು ಇದನ್ನು ಹೆಚ್ಚುಮಾಡುತ್ತೀರಾ? ಮಾನ್ಯ ಮುಖ್ಯಮಂತ್ರಿಗಳು ಕೂಡ ಇಲ್ಲೇ ಇದ್ದಾರೆ.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ: ಮೊದಲು ಕೋರ್ಟಿನಿಂದ ಅವರು ವಾಪಸ್ಸು ಪಡೆಯಲಿ. ಆಮೇಲೆ ಅದನ್ನು ಸರ್ಕಾರ ಪರಿಶೀಲನೆ ಮಾಡುತ್ತದೆ.

(ಗೊಂದಲ)

ಅಧ್ಯಕ್ಷರು: ಅವರ ಭಯ ಏನು ಎಂದರೆ, ಕೋರ್ಟ್‌ದಲ್ಲಿ ಏನಾಗುತ್ತದೋ ಎಂದು, ಈ ಭಯ ಮಂತ್ರಿಗಳಿಗೆ ಇದೆ. ಅವರು ಕೋರ್ಟಿನಿಂದ ವಾಪಸ್ಸು ಪಡೆಯಲಿ, ಆಮೇಲೆ ಕನ್ಸಿಡರ್ ಮಾಡುತ್ತೇನೆ ಎಂದು ಅವರು ಹೇಳುತ್ತಾ ಇದ್ದಾರಲ್ಲ?

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೇ, ಸಿಂಗಲ್ ಬೆಂಚ್‌ನಲ್ಲಿ ಇದು ತೀರ್ಮಾನ ಆಗಿತ್ತು. ಆದರೆ, ಸರ್ಕಾರದವರು ಅಪೀಲ್ ಮಾಡಿದ್ದಾರೆ. ಅದು ಅವರ ಪರವಾಗಿಯೇ ಆಗಿತ್ತು. ಇಲ್ಲಿಯೂ ಅವರ ಪರವಾಗಿಯೇ ಆಗುತ್ತದೆ. ಇದರ ಬಗ್ಗೆ ಸುಮ್ಮಾನೆ ಇವರು ಗುದ್ದಾಡುವುದು ಬೇಡ. ದಯವಿಟ್ಟು ತಾವು ಅದನ್ನು ಸರಿ ಮಾಡಬೇಕೆಂದು ನಾನು ಮಾನ್ಯ ಅಧ್ಯಕ್ಷರ ಮುಖಾಂತರ ಕೇಳಿಕೊಳ್ಳುತ್ತೇನೆ. ದಯಮಾಡಿ ಸರಿಯಾದ ಉತ್ತರ ಕೊಡಿ. 'ಪರಿಶೀಲಿಸುತ್ತೇನೆ', ಎಂದು ಹೇಳುವುದು ಬೇಡ.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ: ಮಾನ್ಯ ಅಧ್ಯಕ್ಷರೇ, ಇವರು ಏರ್ಪಾಡು ಮಾಡಿ ಹೊರತೆಗೆಸಲಿ. ಆಮೇಲೆ ಪ್ರಯತ್ನ ಪಡೋಣ.

ಅಧ್ಯಕ್ಷರು: ಆಯಿತು ಬಿಡಿ.

ಶ್ರೀ ಕೆ.ಶ್ರೀನಿವಾಸಗೌಡ ಕುಡುವನಹಳ್ಳಿ: ಕೋರ್ಟಿನಿಂದ ಆದೇಶ ಆಗಿದೆ. ಇವರು ಅದಕ್ಕೆ ಅಪೀಲ್ ಮಾಡಿದ್ದಾರೆ. ಈ ಪಟೇಲರ ಜೊತೆಯಲ್ಲಿ 'ಪೋಲೀಸ್ ಪಟೇಲರು' ಅಂತ ಕೂಡ ಕೆಲವರಿಗೆ ಭತ್ಯೆ ಕೊಡುತ್ತಿದ್ದಾರೆ. ನಮ್ಮ ತಾಲ್ಲೂಕಿನ ಜಡೇರಿ ಎನ್ನುವ ಗ್ರಾಮದಲ್ಲಿ ಅವರಿಗೆ ಇದು ಬರುತ್ತಿಲ್ಲ. ಅದೇನೋ ಅಪಾಯಿಂಟ್‌ಮೆಂಟ್ ಡೇಟ್‌ನಲ್ಲಿ ವ್ಯತ್ಯಾಸ ಇದೆಯೆನ್ನುವ ಕಾರಣಕ್ಕೆ ಅವರಿಗೆ ಬರುತ್ತಿಲ್ಲ. ಅದಕ್ಕೋಸ್ಕರ ಈ ತರಹ ಡಿಸ್ಕ್ರಿಮಿನೇಟ್ ಡೇಟ್ಸ್ ಕೊಟ್ಟು ಏಕೆ ಮಾಡುತ್ತೀರಿ? ಪಾಪ, ಅವರು ವಯಸ್ಸಾದವರು. ಇನ್ನು ಎಷ್ಟು ದಿವಸ ಬದುಕುತ್ತಾರೋ ಏನೋ! ಆದ್ದರಿಂದ,

ಅವರಿಗೂ ಕೂಡ ಕೊಡುವಂಥ ಕೆಲಸವನ್ನು ಮಾಡಬೇಕೆಂದು ನಾನು ಹೇಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ಮಾಜಿ ಪಟೇಲರು ಒಂದಷ್ಟು ಜನ ಉಳಿದಿದ್ದಾರೆ. ಮಾನ್ಯ ಜೆ.ಹಚ್.ಪಟೇಲರು ಮುಖ್ಯಮಂತ್ರಿಗಳಿದ್ದಾಗ ಇದರ ಬಗ್ಗೆ ವಿಧಾನಸಭೆಯಲ್ಲಿ ಪ್ರಸ್ತಾಪಕ್ಕೆ ಬಂದಿತ್ತು. ಆಗ ಸಭಾಧ್ಯಕ್ಷರಾಗಿದ್ದಂಥ ಮಾನ್ಯ ರಮೇಶ್‌ಕುಮಾರ್ ಅವರು ಒಂದು ಸಲಹೆಯನ್ನು ಕೊಟ್ಟಿದ್ದರು. ಇವರು ಬಹಳ ಜನ ಇಲ್ಲ, ಮಾಜಿ ಪಟೇಲರು ಯಾರ್ಯಾರು ಇದ್ದಾರೆ, ಅವರಿಗೆ ಗೌರವಧನ ಕೊಡಬೇಕು, ಅವರಿಗೆ ಜೀವನ ನಡೆಸಲಿಕ್ಕೆ ಒಂದು ಅವಕಾಶ ಕೊಡಿ ಎಂದು ಸಲಹೆ ಮಾಡಿದರು. ಆದ್ದರಿಂದ, ದಯವಿಟ್ಟು ಇದರ ಬಗ್ಗೆ ಗಮನಹರಿಸಿ. ಇದಕ್ಕೆ ಏನಾದರೂ ಮಾಡಿ ಒಂದು ಮುಕ್ತಾಯ ಹಾಡಿರಿ.

ಶ್ರೀ ಎಸ್.ಎಸ್.ಪಾಟೀಲ್: ಸರ್ಕಾರಕ್ಕೆ ಹೋದರೆ ಏನೂ ಬರುವುದಿಲ್ಲ. ಕೊನೆಗೆ ಯಾವುದಾದರೂ ಒಂದು ಉತ್ತರ ಹೇಳುತ್ತಾರೆ.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ: ಡಿಸ್ಕ್ರಿಮಿನೇಶನ್‌ನ್ನು ಸಾಧ್ಯವಾದಷ್ಟು ಮಟ್ಟಿಗೆ ಕಡಿಮೆ ಮಾಡಲು ಪರಿಶೀಲಿಸುತ್ತೇನೆ. ಅದನ್ನು ಸರಿಮಾಡೋಣ. ಪೋಲೀಸ್ ಪಟೇಲರಿಗೆ ಇದು ಅನ್ವಯವಾಗುವುದಿಲ್ಲವೆಂದು ಹೇಳಿ ರೆಗ್ಯುಲರ್ ಪಟೇಲರಿಗೆ ಮಾತ್ರ ಇದನ್ನು ಮಂಜೂರು ಮಾಡಿದ್ದಾರೆ.

(ಗೊಂದಲ)

ಶ್ರೀ ಹೆಚ್.ಸಿ.ಶ್ರೀಕಂಠಯ್ಯ: ಬಾಕಿ ಇದ್ದರೆ ಅದನ್ನು ಕೊಡುವ ಪ್ರಯತ್ನ ಮಾಡುತ್ತೇನೆ.

ಶ್ರೀ ಎಸ್.ಎಸ್.ಪಾಟೀಲ್: ಆಗಬಹುದು.

ಶ್ರೀ ಕೆ.ಶ್ರೀನಿವಾಸಗೌಡ ಕುಡುವನಹಳ್ಳಿ: ಪೋಲೀಸ್ ಪಟೇಲರಿಗೆ...

ಅಧ್ಯಕ್ಷರು: ಅದು ಅನ್ವಯಿಸುವುದಿಲ್ಲವೆಂದು ಹೇಳಿದ್ದಾರೆ.

ತುಮಕೂರು ಜಿಲ್ಲೆಗ ಡಿ.ಎಲ್.ಡಿ.ಬಿ. ಯೋಜನೆಗೆ ಬಿಡುಗಡೆಯಾದ ಅನುದಾನದ ಮೊತ್ತ.

343(2045)

ಶ್ರೀ ಎಸ್.ಶಿವಣ್ಣ(ತುಮಕೂರು): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?